ಈ) ರಾಜ್ಯದಲ್ಲಿ ಇನ್ನೂ ಹೆಚ್ಚಿನ ಹಸಿರು ಪಡಿತರ ಚೀಟಿಗಳನ್ನು ವಿತರಿಸುವ ಉದ್ದೇಶ ಇರುವುದಿಲ್ಲ. ಎಲ್ಲಾ ನೈಜ ಬಿಪಿಎಲ್ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

ರಾಜ್ಯದ ಸಹಕಾರ ಸಂಘಗಳ ಆಡಿಟ್ ಫೀ ಬಗ್ಗೆ

2323(3050) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಲೆಕ್ಕ ಪರಿಶೋಧನ ಶುಲ್ಕ ದರದಹೆಚ್ಚಳದ ಬಗ್ಗೆ ಮನವಿ ಬಂದಿದ್ದು ಲೆಕ್ಕಪರಿಶೋಧನಾ ಶುಲ್ಕ ಆಕರಣೆಯನ್ನು ದುಡಿಯುವ ಬಂಡವಾಳ ಆಧರಿಸಿ rationalisation ಮಾಡುವ ಸರ್ಕಾರದ ಪ್ರಸ್ತಾವನೆ ಕಾರ್ಯ ರೂಪಕ್ಕೆ ಎಂದಿನಿಂದ ಬರುತ್ತದೆ;

ಆ) ಲೆಕ್ಕ ಪರಿಶೋಧನಾ ಶುಲ್ಕ ಹೆಚ್ಚು ಎಂದು ಕೆಲವು ಸಂಸ್ಥೆಗಳು ನ್ಯಾಯಾಲಯದ ಮೊರೆ ಹೋಗಿರುವುದು ನಿಜವೇ; ಹಾಗಿದ್ದಲ್ಲಿ ಸರ್ಕಾರದ ನಿಲುವೇನು;

ಇ) ಈ ಹಿನ್ನೆಲೆಯಲ್ಲಿ ಸರ್ಕಾರ ತಮ್ಮ ಮಾರ್ಗ ಸೂಚಿಯನ್ನು ಪ್ರಕಟಪಡಿಸುವುದೇ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಸಹಕಾರ ಸಂಘಗಳ ಅಧಿನಿಯಮ 63ರಂತೆ ಲೆಕ್ಕಪರಿಶೋಧನೆಯಾದ ಎಲ್ಲಾ ಸಂಘಗಳಿಗೆ ಲೆಕ್ಕ ಪರಿಶೋಧನಾ ಶುಲ್ಕದ ದರವನ್ನು ದುಡಿಯುವ ಬಂಡವಾಳ ಅಥವಾ ವ್ಯಾಪಾರ ವಹಿವಾಟು ಯಾವುದು ಹೆಚ್ಚೋ ಅದರ ಮೇಲೆ ಪ್ರತಿ ನೂರು ರೂಪಾಯಿಗಳಿಗೆ 20 ಪೈಸೆಯಂತೆ ನಿಗದಿಪಡಿಸಲಾಗಿದೆ.

ಲೆಕ್ಕ ಪರಿಶೋಧನಾ ಶುಲ್ಕದ ಹೆಚ್ಚಳವನ್ನು ಕಡಿಮೆ ಮಾಡುವಂತೆ ಕೆಲವು ಸಹಕಾರಿ ಸಂಸ್ಥೆಗಳು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದು ಸದರಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಕೆಲವೊಂದು ಸಹಕಾರ ಸಂಸ್ಥೆಗಳು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಲೆಕ್ಕ ಪರಿಶೋಧನಾ ಶುಲ್ಕದ ಹೆಚ್ಚಳವನ್ನು ಪ್ರಶ್ನಿಸಿ ರಿಟ್ ಅರ್ಜಿ ಸಲ್ಲಿಸಿರುತ್ತವೆ. ಲೆಕ್ಕ ಪರಿಶೋಧನಾ ಶುಲ್ಕವನ್ನು rationalization ಮಾಡುವ ವಿಷಯವು ಪರಿಶೀಲನೆಯಲ್ಲಿದೆ.

ಯಶಸ್ವಿನಿ ವಿಮಾ ಯೋಜನೆಯ ಅನುಷ್ಠಾನ

2324(3038) : ಶ್ರೀ ಅತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಯಶಸ್ವಿನಿ ವಿಮಾ ಯೋಜನೆಯು ಯಾವ್ಯಾವ ಜಿಲ್ಲೆಯಲ್ಲಿ ಅನುಷ್ಠಾನಗೊಂಡಿದೆ.

ಆ) ಈ ಯೋಜನೆಯ ವಿವರಗಳೇನು;

ಇ) ಇದರಿಂದಾಗಿ ರೈತ ಸಮುದಾಯಕ್ಕೆ ದೊರಕುವ ಸೌಲಭ್ಯಗಳೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಯಶಸ್ವಿನಿ ಸಹಕಾರ ರೈತ ಆರೋಗ್ಯ ಯೋಜನೆಯು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

ಆ) ಈ ಯೋಜನೆಯು ದಿನಾಂಕ: 1.6.2003 ರಿಂದ ಜಾರಿಗೆ ಬಂದಿರುತ್ತದೆ. ಸಹಕಾರ ಸಂಘದ ರೈತ ಸದಸ್ಯರು ಮಾಹೆಯಾನ 5 ರೂ. ನಂತೆ ವಾರ್ಷಿಕ 60.00 ರೂ.ಗಳನ್ನು ಪಾವತಿಸಬೇಕಾಗಿರುತ್ತದೆ. ಸರ್ಕಾರವು ತಮ್ಮ ಪಾಲಿನ ವಾರ್ಷಿಕವಾಗಿ 30.00 ರೂ.ಗಳು ಪಾವತಿಸುತ್ತದೆ.